**O.S.90/13**
**DW1**

ದಿನಾಂಕ 12-6-2019 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಎನ್ ವಕೀಲರಿಂದಃ</u>

1 ಮತ್ತು 2 ನೇ ಪ್ರತಿವಾದಿಯವರು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯವರು ಬಂಗಾಡಿಯಲ್ಲಿದ್ದಾರೆ. ಅವರೂ ಕೂಡಾ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅವರಿಗೆ ಓಡಾಡಲು ತುಂಬಾ ತೊಂದರೆ ಇದೆ. ಮೊದಲನೇ ಪ್ರತಿವಾದಿಯನ್ನು ಅವರ ಮಗಳು ನೋಡಿಕೊಳ್ಳುತ್ತಾರೆ. 2 ನೇ ಪ್ರತಿವಾದಿಯವರು ಅವರ ಗಂಡು ಮಕ್ಕಳ ಜೊತೆ ವಾಸವಿದ್ದಾರೆ. 6 ನೇ ಪ್ರತಿವಾದಿ ಮತ್ತು ಅವರ ಗಂಡ ಒಟ್ಟಿಗೆ ವಾಸವಿದ್ದಾರೆ. ನಾನು ಹಾಜರು ಪಡಿಸಿರುವ ಅಧಿಕಾರ ಪತ್ರವನ್ನು 1, 2 ಮತ್ತು 6 ನೇ ಪ್ರತಿವಾದಿಯವರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. 1, 2 ಮತ್ತು 6 ನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆಂದು ಈ ಅಧಿಕಾರಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಯವರಿಗೆ ಮದುವೆಯಾಗಿ ಸುಮಾರು 45 ವರ್ಷಗಳಾಗಿದೆ. ಮದುವೆಯಾದ ದಿನದಿಂದ ಕನ್ಯಾಡಿ I ರಲ್ಲಿಯೇ ವಾಸವಿದ್ದಾರೆ. 1 ನೇ ಪ್ರತಿವಾದಿಯವರು ವಿಟ್ಲದಲ್ಲಿ 8 ವರ್ಷದಿಂದ ವಾಸವಿರುತ್ತಾರೆ. ಅದಕ್ಕಿಂತ ಹಿಂದೆ ಅವರ ಗಂಡನ ಮನೆ ನಡದಲ್ಲಿ ವಾಸವಿದ್ದರು. ಕಲ್ಯಾಣಿಯವರಿಗೆ ಮದುವೆಯಾಗಿ ಸುಮಾರು 60 ವರ್ಷ ಆಗಿರಬಹುದು. 2 ನೇ ಪ್ರತಿವಾದಿಯವರು ಸುಮಾರು 55 ವರ್ಷದಿಂದ ಕೊಯ್ಯೂರು ಗ್ರಾಮದಲ್ಲಿ ವಾಸವಿದ್ದಾರೆ. ನನ್ನ ಅಜ್ಜ ಚೇಂಕ್ರ ಮಡಿವಾಳರವನ್ನು ನೋಡಿರುತ್ತೇನೆ. ದಾವಾ ಸೊತ್ತುಗಳು ನಮ್ಮ ಅಜ್ಜ ಮತ್ತು ಮಕ್ಕಳು ಒಟ್ಟಿಗೆ ಸಂಪಾದಿಸಿದ ಆಸ್ತಿಗಳು ಮತ್ತು ದಾವಾ ಸೊತ್ತುಗಳು ನಮ್ಮ ಅಜ್ಜ ಮತ್ತು ಮಕ್ಕಳಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಹೇಳಲಾಗುವುದಿಲ್ಲ. ನಮ್ಮ ಅಜ್ಜ ಮತ್ತು ಮಕ್ಕಳು ಒಟ್ಟಿಗೆ ದುಡಿಯುತ್ತಿದ್ದರಿಂದ ಸದರಿ ಆಸ್ತಿಗಳು ಅಜ್ಜ ಮತ್ತು ಮಕ್ಕಳಿಗೆ ಸೇರಿದ ಆಸ್ತಿಗಳು ಎಂದು ನುಡಿಯುತ್ತಾರೆ. ನನ್ನ ಅಜ್ಜ ಮತ್ತು ಮಕ್ಕಳು ಒಟ್ಟಿಗೆ ದುಡಿಯುತ್ತಿದ್ದರೆಂದು ನನ್ನ ಸ್ವಂತ ಅನುಭವದಿಂದ ನುಡಿಯುತ್ತಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ 25 ವರ್ಷದಿಂದ ಅನುಭವ ಇದೆ.

ದೂಮಣ್ಣ ಮಡಿವಾಳರವರ ಹೆಂಡತಿ ಹೆಸರು ದೇಜಮ್ಮ. ಚೇಂಕ್ರ ಮಡಿವಾಳರವರ ಹೆಂಡತಿ ಹೆಸರು ಪೊನ್ನಕ್ಕ. ಚೇಂಕ್ರ ಮಡಿವಾಳರವರು ಮರಣ ಹೊಂದುವ ಪೂರ್ವದಲ್ಲಿಯೇ ಅವರ ಹೆಂಡತಿ ಮೃತ ಪಟ್ಟಿರುತ್ತಾರೆ.

ದಾವಾ ಸೊತ್ತಿನ ವ್ಯವಹಾರಗಳನ್ನು ಚೇಂಕ್ರ ಮಡಿವಾಳರವರು ಜೀವಂತ ಇರುವವರೆಗೂ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರು ಮತ್ತು ಮಕ್ಕಳು ಒಟ್ಟಿಗೆ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಅಜ್ಜ ಮತ್ತು ಅವರ ಮಕ್ಕಳು ಯಾವ ಯಾವ

ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿಯು ಮುಂದುವರಿದು ಎಲ್ಲರೂ ಒಟ್ಟಿಗೆ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ